BENNETT, COLEMAN & CO. LTD. | ESTABLISHED 1838 | TIMESOFINDIA.COM | EPAPER.TIMESOFINDIA.COM MANGALURU | WEDNESDAY, JUNE 28, 2017 | PAGES 20 | PRICE ₹ 4.50

# THE TIMES OF INDIA

INCLUDES 4 PAGES OF MANGALORE TIMES* (*MANGALURU, MANIPAL & UDUPI CITY AREAS ONLY)



INDRANI ALLEGES SHE WAS BEATEN UP IN BYCULLA JAIL, MOVES CBI COURT 5

PRESIDENTIAL POLL NOT ABOUT 'DALIT VS DALIT', SAYS MEIRA KUMAR 5



RAVI SHASTRI LIKELY TO APPLY FOR POST OF COACH OF INDIAN CRICKET TEAM 15

**Int'l Yoga Day:** International Yoga Day was celebrated at Sahyadri Engineering and Mangaluru, Mangaluru. Govind Prabhu, retired senior manager, Karnataka Bank, delivered a talk on yoga for health and demonstrated some asanas. Govind is a certified trainer and conducts yoga classes at various reputed institutions in and around Mangaluru.

ಸೋಮವಾರ, 26 ಜೂನ್ 2017 | ಪುಟಗಳು: 18+4(UDP6) | ಬೆಲೆ: ₹ 5.00
www.vijaykarnataka.com
ಪುಟ: 16 | ಸಂಚಿಕೆ: 331

# VK ವಿಜಯ ಕರ್ನಾಟಕ

ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ |



ಜಾಹ್ನವಿ ಕಪೂರ್ ಬಗ್ಗೆ ವ್ಯಾಪಕ ಗಾಸಿಪ್: ಚಿಂತೆಯಲ್ಲಿ ಮುಳುಗಿದ ತಾಯಿ ಶ್ರೀದೇವಿ

ಆಫ್ಘನ್-ಭಾರತ ಸ್ನೇಹ ಸಂಕೇತವಾದ ಸಲ್ಮಾ ಡ್ಯಾಮ್ ಬಳಿ ತಾಲಿಬಾನ್ ಉಗ್ರರ ದಾಳಿ: 10 ಪೊಲೀಸರು ಬಲಿ

ಡಿಶೂಂ ಚಿತ್ರದ ಮೂಲಕ ಅಕ್ಷಯ್ ಖನ್ನಾ 2ನ... ಇನಿಂಗ್ಸ್ ಆರಂಭ: ಸಣ್ಣ ಪಾತ್ರಕ್ಕೂ ಸೈ ಎಂದ ನ...



ಮಂಗಳೂರು: ಅಡ್ಯಾರಿನ ಸಹ್ಯಾದ್ರಿ ಕಾಲೇಜು ಕ್ಯಾಂಪಸ್‌ನಲ್ಲಿ ವಿಶ್ವ ಯೋಗ ದಿನಾಚರಣೆ ನಡೆಯಿತು. ಕರ್ನಾಟಕ ಬ್ಯಾಂಕ್ ಸೀನಿಯರ್ ಮ್ಯಾನೇಜರ್ ಗೋವಿಂದ ಪ್ರಭು ಮುಖ್ಯ ಅತಿಥಿಯಾಗಿ ಭಾಗವಹಿಸಿ ಯೋಗದ ಮಹತ್ವ ವಿವರಿಸಿದರು. ಸಹ್ಯಾದ್ರಿ ಕಾಲೇಜು ಆಡಳಿತಗಾರ ಡಾ.ಸಿ.ಕೆ.ಮಂಜುನಾಥ್ ಸ್ವಾಗತಿಸಿದರು. ಸಹ್ಯಾದ್ರಿ ಕಾಲೇಜು ಪ್ರಿನ್ಸಿಪಾಲ್ ಡಾ.ಉಮೇಶ್ ಎಂ.ಭುಶಿ ಅಧ್ಯಕ್ಷತೆ ವಹಿಸಿದ್ದರು.

ಸೋಮವಾರ, 26 ಜೂನ್ 2017 | ಪುಟಗಳು: 18+4(UDP6) | ಬೆಲೆ: ₹ 5.00
www.vijaykarnataka.com
ಸಂಪುಟ: 16 | ಸಂಚಿಕೆ: 331
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ |



ಜಾಹ್ನವಿ ಕಪೂರ್ ಬಗ್ಗೆ ವ್ಯಾಪಕ ಗಾಸಿಪ್: ಚಿಂತೆಯಲ್ಲಿ ಮುಳುಗಿದ ತಾಯಿ ಶ್ರೀದೇವಿ

ಆಫ್ಘನ್-ಭಾರತ ಸ್ನೇಹ ಸಂಕೇತವಾದ ಸಲ್ಮಾ ಡ್ಯಾಮ್ ಬಳಿ ತಾಲಿಬಾನ್ ಉಗ್ರರ ದಾಳಿ: 10 ಪೊಲೀಸರು ಬಲಿ

ಡಿಶೂಂ ಚಿತ್ರದ ಮೂಲಕ ಅಕ್ಷಯ್ ಖನ್ನಾ 2ನ… ಇನಿಂಗ್ಸ್ ಆರಂಭ: ಸಣ್ಣ ಪಾತ್ರಕ್ಕೂ ಸೈ ಎಂದ…

# ಗುರಿ ಇದ್ದಾಗ ಅವಕಾಶಕ್ಕೆ ಕೊರತೆ ಇಲ್ಲ



**ಮಂಗಳೂರು:** ಜಾಗತಿಕ ಶಿಕ್ಷಣ ವ್ಯವಸ್ಥೆಯಲ್ಲಿ ದಿನಕ್ಕೊಂದು ಹೊಸ ಪದವಿ ಅರಳ ಬಹುದು. ಅಂತೆಯೇ ಮರಳ ಬಹುದು. ಆದರೆ ವಾಸ್ತವಿಕ ಚಿಂತನೆಯಲ್ಲಿ ಮ್ಯಾನೇಜ್‌ಮೆಂಟ್ ಕೋರ್ಸ್ ಸಾರ್ವಕಾಲಿಕವಾಗಿ ಬೆಳೆಯುತ್ತಿದೆ. ಸಮಸ್ಯೆ ಎಂಬುದು ದೇಹಕ್ಕೆ ಮತ್ತು ದೇಶಕ್ಕೆ ಅನಿವಾರ್ಯವಾಗಿಯೇ ಇದ್ದರೂ ವಿದ್ಯಾರ್ಥಿಗೆ ಗುರಿ ನಿರ್ದಿಷ್ಟವಾಗಿದ್ದಾಗ ಅವಕಾಶಕ್ಕೆ ನಮ್ಮ ದೇಶದಲ್ಲಿ ಕೊರತೆಯಿಲ್ಲ ಎಂದು ಸಹ್ಯಾದ್ರಿ ಶಿಕ್ಷಣ ಸಂಸ್ಥೆಯ ನಿರ್ದೇಶಕಿ ಡಾ.ವಿಶಾಲ ಸಮರ್ಥ ಹೇಳಿದರು.

ನಗರದ ಶಾರದಾ ಪ್ರಥಮ ದರ್ಜೆ ಕಾಲೇಜಿನ 'ಪ್ರಥಮ ಪದವಿ- ಪ್ರಥಮ ದಿನದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಂಸ್ಥೆಯ ಅಧ್ಯಕ್ಷ ಪ್ರೊ.ಎಂ.ಬಿ. ಪುರಾಣಿಕ್ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳು ವಿದ್ಯಾವಂತರಾಗುತ್ತಿದ್ದಾರೆ. ಆದರೆ ನಮ್ಮ ನೆಲದ ಸಂಸ್ಕೃತಿ ಶಿಕ್ಷಣವನ್ನು ಮರೆಯುತ್ತಿದ್ದಾರೆ. ನಮ್ಮ ನೆಲವನ್ನು, ನಮ್ಮ ಸಂಸ್ಕೃತಿಯನ್ನು ಪ್ರೀತಿಸುವ, ಗೌರವಿಸುವ ಮನೋಭಾವ ವಿದ್ಯಾರ್ಥಿಗಳಲ್ಲಿ ಮೂಡಬೇಕು ಎಂದರು.

ನಮ್ಮೊಳಗಿರುವ ಶಕ್ತಿಯನ್ನು ಹುಡುಕುವ, ಜಾಗೃತಗೊಳಿಸುವ ಮತ್ತು ಆ ಮೂಲಕ ರಾಷ್ಟ್ರವನ್ನು ಕಟ್ಟುವ ಮನಸ್ಸನ್ನು ವಿದ್ಯಾರ್ಥಿ ದೆಸೆಯಲ್ಲಿಯೇ ರೂಢಿಸಿಕೊಂಡಾಗ, ಮುಂದೊಂದು ದಿನ ಭವ್ಯ ಭಾರತದ ಭವಿಷ್ಯದ ಸಂಪತ್ತು ನಾವಾಗುತ್ತೇವೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಸ್.ಪ್ರದೀಪ ಕುಮಾರ ಕಲ್ಕೂರ ಹೇಳಿದರು.

ಸಂಸ್ಥೆಯ ಸಲಹೆಗಾರರಾದ ಡಾ. ಲೀಲಾ ಉಪಾಧ್ಯಾಯ, ವೈಸ್ ಪ್ರಿನ್ಸಿಪಾಲ್ ಪ್ರೊ.ಮಾಧವ ಕೆ.ಉಪಸ್ಥಿತರಿದ್ದರು.

ಪ್ರಿನ್ಸಿಪಾಲ್ ಅಷ್ಟಾವಧಾನಿ ಡಾ. ಕಬ್ಬಿನಾಲೆ ಬಾಲಕೃಷ್ಣ ಭಾರದ್ವಾಜ್ ಸ್ವಾಗತಿಸಿದರು. ಪ್ರೊ.ವಿದ್ಯಾ ಎಸ್. ನಾಯಕ್ ಕಾರ್ಯಕ್ರಮ ನಿರೂಪಿಸಿದರು. ಪ್ರೊ.ಭವ್ಯಲತಾ ವಂದಿಸಿದರು.